# ನೆರೆ

**Que 1: ನಸುಗಪ್ಪು - ಈ ಪದವನ್ನು ವಿಂಗಡಿಸಿ ಸಂಧಿಯನ್ನು ಹೆಸರಿಸಿರಿ** ***Marks :(1)***

**Ans:** ನಸು + ಕಪ್ಪು - ನಸುಗಪ್ಪು - ಆದೇಶ ಸಂಧಿ

**Que 2: ನೆರೆಯೊಳಗೆ ಸಿಲುಕಿ ಹಸಿವು ಮತ್ತು ಜೀವಭಯಗಳಿಂದ ಕಂಗೆಟ್ಟ ನಾಯಿಯ ಅಸಹಾಯಕ ಪರಿಸ್ಥಿತಿಯನ್ನು ನಿಮ್ಮ ಮಾತುಗಳಲ್ಲಿ ನಿರೂಪಿಸಿರಿ.** ***Marks :(6)***

**Ans:** ನೆರೆಯೊಳಗೆ ಸಿಲುಕಿದ ನಾಯಿ - ರಕ್ಷಣೆಗಾಗಿ ಮೊರೆಯಿಡುವುದು - ಹಸಿವು ಮತ್ತು ಜೀವಭಯ - ಅಸಹಾಯಕ ಸ್ಥಿತಿ

**Que 3: ಕೆಳಗೆ ನೀಡಲಾದ ಆಂಗ್ಲ ಭಾಷೆಯ ಗದ್ಯಭಾಗವನ್ನು ಕನ್ನಡಕ್ಕೆ ಭಾಷಾಂತರಿಸಿರಿ.** ***Marks :(4)***

**Ans:** ಸಮರ್ಪಕವಾದ ಭಾಷಾಂತರಕ್ಕೆ

**Que 4: "ನಾಯಿಯ ಸ್ವಾಮಿನಿಷ್ಠೆ ಹಾಗೂ ಮನುಷ್ಯನ ಕೃತಘ್ನತೆ 'ನೆರೆ' ಕತೆಯಲ್ಲಿ ಅನಾವರಣಗೊಂಡಿವೆ" ಈ ಹೇಳಿಕೆಯನ್ನು ಸಮರ್ಥಿಸಿಕೊಂಡು ವಿಮರ್ಶಾತ್ಮಕ ಲೇಖನವೊಂದನ್ನು ಬರೆಯಿರಿ** ***Marks :(5)***

**Ans:** ಅನಿರೀಕ್ಷಿತ ನೆರೆಯಿಂದಾಗಿ ಜಲಾವೃತವಾದ ಮನೆ - ಸಾಕುನಾಯಿಯನ್ನು ಮರೆತ ಚೇನ್ನ - ಅನಾಥವಾದ ನಾಯಿಯ ದೈನ್ಯ ಸ್ಥಿತಿ- ರಕ್ಷಣೆಗಾಗಿ ಮೊರೆಯಿಡುವುದು - ಹಸಿವಿನ ಕೂಗು - ಸಾವಿನ ಭಯದ ನಡುವೆಯೂ ತೋರಿದ ಸ್ವಾಮಿನಿಷ್ಠೆ - ಮಾನವನ ಕೃತಘ್ನ ಮನೋಭಾವ

**Que 5: ಕಾರ್ಮೋಡ - ಇದರ ವಿಗ್ರಹ ವಾಕ್ಯವನ್ನು ಬರೆದು ಸಮಾಸವನ್ನು ಹೆಸರಿಸಿರಿ** ***Marks :(1)***

**Ans:** ಕರಿದು ಮೋಡ/ಕರಿದಾದ ಮೋಡ - ಕರ್ಮಧಾರಯ ಸಮಾಸ

**Que 6: ಮೇಲೆರಗು - ಪದವಿಂಗಡಿಸಿ ಸಂಧಿಯನ್ನು ಹೆಸರಿಸಿರಿ** ***Marks :(1)***

**Ans:** ಮೇಲೆ + ಎರಗು – ಲೋಪಸಂಧಿ

**Que 7: ಸೂರ್ಯ, ಕತ್ತಲು - ಪ್ರತಿಯೊಂದು ಪದಕ್ಕೂ ಎರಡೆರಡು ಪರ್ಯಾಯ ಪದಗಳನ್ನು ಬರೆಯಿರಿ** ***Marks :(2)***

**Ans:** ರವಿ, ಭಾನು ,ಅರ್ಕ, ಆದಿತ್ಯ.
ಇರುಳು, ರಾತ್ರಿ. ತಿಮಿರ, - ಹೀಗೆ ಯಾವುದಾದರೂ ಎರಡನ್ನು ಬರೆದಿದ್ದರೆ

**Que 8: ಗಂಭೀರ , ದೀನ ಈ ಪದಗಳ ಭಾವನಾಮ ರೂಪಗಳನ್ನು ಬರೆಯಿರಿ** ***Marks :(1)***

**Ans:** ಗಾಂಭೀರ್ಯ , ದೈನ್ಯ

**Que 9: ಭಯ , ಕೃತಜ್ಞ    ಇವುಗಳ ವಿರೋಧಾರ್ಥ ಪದಗಳನ್ನು ಬರೆಯಿರಿ** ***Marks :(1)***

**Ans:** ನಿರ್ಭಯ , ಕೃತಘ್ನ